KARNATAKA NURSING & PARAMEDICAL SCIENCES EDUCATION (REGULATION) AUTHORITY

**Para Medical Board**

# 40/20A, Lakshmi Complex, First Floor, Opp. Vani Vilas Hospital, Fort, Bengaluru-560002

**Ph No**: 080-26702159, 26705773 **Email**: pmboffice97@gmail.com / pmbexamination@gmail.com

No: PMB/ /2019-20 Date: 14.06.2019

## ಸುತ್ತೋಲೆ

ವಿಷಯ: ಮಂಡಳಿಯ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದು 6 ವ್ಯಾಸಂಗದ ಅವಧಿಯನ್ನು ಪೂರೈಸಿರುವ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿ ನೀಡುವ ಬಗ್ಗೆ.

******

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಂಡಳಿಗೆ ಸಂಯೋಜನೆಗೊಂಡಿರುವ ರಾಜ್ಯದ ಎಲ್ಲಾ ಪ್ಯಾರಾ ಮೆಡಿಕಲ್ ಕಾಲೇಜುಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮಂಡಳಿಯ ಸಭೆಯಲ್ಲಿ ಈ ಮುಂಚೆ ತೀರ್ಮಾನಿಸಿದ್ದಂತೆ ಪ್ಯಾರಾ ಮೆಡಿಕಲ್ ಕೋರ್ಸ್‌ಗಳ ವ್ಯಾಸಂಗಕ್ಕೆ ಸೇರಿ 6 ವರ್ಷ ಪೂರೈಸಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಿರುವುದಿಲ್ಲ. ಆದಾಗ್ಯೂ ಕೆಲವು ವಿದ್ಯಾರ್ಥಿಗಳು ಮಾನ್ಯ ನ್ಯಾಯಾಲಯದ ಮೊರೆ ಹೋಗಿ ಪರೀಕ್ಷೆ ಬರೆಯಲು ಅನುಮತಿ ಪಡೆದು ಪರೀಕ್ಷೆಗೆ ಹಾಜರಾಗಿರುತ್ತಾರೆ. 6 ವರ್ಷ ವ್ಯಾಸಂಗದ ಅವಧಿ ಪೂರೈಸಿ ಅನುತ್ತೀರ್ಣರಾಗಿರುವ ಅನೇಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಮನವಿಯನ್ನು ಸಲ್ಲಿಸಿ ಮಾನ್ಯ ನ್ಯಾಯಾಲಯದ ಮೊರೆ ಹೋಗದೆ ಪರೀಕ್ಷೆಗೆ ಹಾಜರಾಗಲು ಅನುಮತಿಯನ್ನು ನೀಡುವಂತೆ ಕೋರಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಂಡಳಿಯ ಸಭೆಯಲ್ಲಿ ಪರಿಗಣಿಸಿರುವುದರಿಂದ ಈ ಎಲ್ಲಾ ವಿದ್ಯಾರ್ಥಿಗಳಿಗೆ ಈ ಕೆಳಗೆ ನಮೂದಿಸಿರುವ ತಮ್ಮ ಸಂಸ್ಥೆಗೆ ಸಮೀಪದ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು.

ಅದುದರಿಂದ, ಆಯಾ ಕಾಲೇಜುಗಳ ಪ್ರಾಂಶುಪಾಲರು ಸದರಿ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಜುಲೈ / ಅಗಸ್ಟ್ 2019ರ ವಾರ್ಷಿಕ ಪರೀಕ್ಷೆಗೆ ಅರ್ಜಿಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳ ಪಟ್ಟಿಯನ್ನು (ನೊಂದಣಿ ಸಂಖ್ಯೆ, ಕೋರ್ಸ್, ಬಾಕಿ ಇರುವ ವಿಷಯ) 22.06.2019ರೊಳಗೆ ಮಂಡಳಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

**ಸಂಭವನೀಯ ಪರೀಕ್ಷಾ ಕೇಂದ್ರಗಳ ಸ್ಥಳಗಳು** (6 ವರ್ಷ ವ್ಯಾಸಂಗದ ಅವಧಿ ಮುಗಿದಿರುವ ವಿದ್ಯಾರ್ಥಿಗಳಿಗೆ): ಬೆಂಗಳೂರು, ಮಂಗಳೂರು, ಬೆಳಗಾವಿ, ಕಲಬುರಗಿ, ಬಳ್ಳಾರಿ, ಶಿವಮೊಗ್ಗ, ವಿಜಯಪುರ

14/6/19

**ವಿಶೇಷಾಧಿಕಾರಿಗಳು**